ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ	ಹಿಂದಿನ 5 ವರ್ಷಗಳ ಅಂದಾಜು	ಚಾಲ್ತಿ.	
ಅಕ್ಕಿ	ರೂಪಾಯಿ 1ಕ್ಕೆ	7	6 ರಿಂದ 6¾ರ ವರಿಗೆ	ಸೇರುಗಳು.
ರಾಗಿ	...	18¾	14 ರಿಂದ 15ರ ವರಿಗೆ	

ವ್ಯವಸಾಯ ಕೆಲಸಗಳು—ರಾಗಿ, ಜೋಳ, ಅವರೆ, ಹುರುಳಿ ಇವುಗಳ ಬಿತ್ತನೆ.

ದನಗಳು ಬಳ್ಳೀ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು ಬಳ್ಳೀ ಸ್ಥಿತಿಯಲ್ಲಿವೆ. ಮೊದಲು ಬಿತ್ತಿದ ಪೈರುಗಳು ಮೊಳಕು ಇವೆ.

ಬಿತ್ತನೆಯಾದ ಪೈರು—ಬೆಂಗಳೂರು ತಾಲ್ಲೂಕಿನಲ್ಲಿ ಭತ್ತವು ಬಿತ್ತಲ್ಪಟ್ಟಿದೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರು—ಹೊಸಕೋಟೆ ತಾಲ್ಲೂಕಿನಲ್ಲಿ ವೈಶಾಖಿ ಭತ್ತವು ಕುಯ್ದು ಇದೆಯೆಂದು ರಿಪೋರ್ಟಾಗಿದೆ. ಕೆಲವು ಕಡೆಗಳಲ್ಲಿ ಖುಷ್ಕೀ ಪೈರುಗಳ ಬಿತ್ತನೆಯೂ ಮತ್ತು ಕುಯ್ಯಲೂ ನಡಿಯುತ್ತಿದ್ದವು.

10. ಕಾಲದ ಆಯತಿಯು ಚೆನ್ನಾಗಿದೆ. ಅಲ್ಲಲ್ಲಿ ಸ್ವಲ್ಪ ಮಳೀ ಆಗಿದೆ. ಆಹಾರ ಜಿನಸು ಸಾಕಾದಷ್ಟು ಇವೆ. ಆದರೆ, ಜಾಧಾರಣವಾಸಿಯು ಇನ್ನೂ ಜಡಾವಿನಲ್ಲೇ ಇದೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಡಿಸ್ಟ್ರಿಕ್ಟಿನಲ್ಲಿ ಬಿತ್ತುವ ಕೆಲಸವು ನಡಿಯುತ್ತಿದೆ.

ನಿಂತಿರುವ ಪೈರುಗಳು—ಬಳ್ಳೀ ಸ್ಥಿತಿಯಲ್ಲಿವೆ. ಆದರೆ ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಲ್ಲಿ ಕಂಬ್ಳೀ ಹುಳಗಳಿಂದ ರಾಗಿ ಪೈರು ಕೆಟ್ಟಿದೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಬೌರಿಂಗ್‌ಪೇಟೆ, ಶ್ರೀನಿವಾಸಪುರ ಇವು ಹೊರ್ತು ವಿುಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಭತ್ತ, ಬಾಗೇಪಲ್ಲಿ ಮತ್ತು ಶ್ರೀನಿವಾಸಪುರ ಈ ತಾಲ್ಲೂಕುಗಳಲ್ಲಿಯೂ ಮತ್ತು ಗುಡಿಬಂಡೆ ಸಬ್ ತಾಲ್ಲೂಕಿನಲ್ಲಿಯೂ ರಾಗಿ, ಅವರೆ ಮತ್ತು ತೊಗರಿ; ಬಾಗೇಪಲ್ಲಿಯಲ್ಲಿ ಹರಳು; ಬಾಗೇಪಲ್ಲಿ, ಶ್ರೀನಿವಾಸಪುರ, ಈ ತಾಲ್ಲೂಕುಗಳಲ್ಲಿ ಸಾವೆ. ಚಿಕ್ಕಬಳ್ಳಾಪುರದ ತಾಲ್ಲೂಕಿನಲ್ಲಿ ಹುರುಳಿ.

ಕುಯ್ಯಲಾದ ಪೈರು—ಗುಡಿಬಂಡೆ ಸಬ್ ತಾಲ್ಲೂಕಿನಲ್ಲಿ ಬರಗು.

ಆಗಬಹುದಾದ ಉತ್ಪತ್ತಿ—8ರಿಂದ 12 ಆಣೆ ವರಿಗೆ.

10. ಕಾಲದ ಆಯತಿಯು ಸುಮಾರಾಗಿದೆ. ಆಹಾರ ಜಿನಸು ಸಿಕ್ಕುತ್ತವೆ. ಬಿತ್ತಿರುವ ಕುಷ್ಕೀ ಪೈರುಗಳಿಗೆ ಮಳೆಯು ಅತ್ಯಾವಶ್ಯಕವಾಗಿ ಬೇಕಾಗಿದೆ.

11. ಬೌರಿಂಗ್‌ಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿಯೂ ಮತ್ತು ಕೋಲಾರ್ ತಾಲ್ಲೂಕು ಷಿಲ್ಲಿಂಗೆರೆಯಲ್ಲಿಯೂ ಅಲ್ಲಲ್ಲಿ ಆದ ಕೆಲವು ಪ್ಲೇಗ್ ಕೇಸುಗಳು, ಗೋರೀಬಿದನೂರು ತಾಲ್ಲೂಕು ಕೆಲವು ಗ್ರಾಮಗಳಲ್ಲಿ ಕಾಲರಾ, ಬೌರಿಂಗ್‌ಪೇಟೆ ತಾಲ್ಲೂಕು ಕೆಲವು ಗ್ರಾಮಗಳಲ್ಲಿ ಕಿಡುಬು, ಇವು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿಯೂ ಉಳುವದು ಮತ್ತು ಬಿತ್ತುವದು.

ಬಿತ್ತನೆಯಾದ ಪೈರುಗಳು—ತುಮಕೂರು, ಮದ್ದಗಿರಿ, ಶಿರಾ, ಗುಬ್ಬಿ, ತಿಪಟೂರು, ಪಾವಗಡ, ಕುಣಿಗಲ್ಲು, ಕೊರ್ಟಗೆರೆ, ತುರುವೇಕೆರೆ, ಇವುಗಳಲ್ಲಿ ರಾಗಿ, ಅವರೆ, ಮತ್ತು ತೊಗರಿ. ತುಮಕೂರು ಮತ್ತು ತಿಪಟೂರಿನಲ್ಲಿ ಭತ್ತ. ಮದ್ದಗಿರಿಯಲ್ಲಿ ಜೋಳ, ಸಾವೆ, ಮತ್ತು ಸವಕೆ.

ಕುಯ್ಯಲಾದ ಪೈರುಗಳು—ತುಮಕೂರು, ಗುಬ್ಬಿ, ತಿಪಟೂರು, ಕುಣಿಗಲ್ಲು, ತುರುವೇಕೆರೆ, ಇವುಗಳಲ್ಲಿ ಭತ್ತ. ಗುಬ್ಬಿ ಮತ್ತು ಕುಣಿಗಲ್ಲಿನಲ್ಲಿ ಕಬ್ಬು. ತಿಪಟೂರಿನಲ್ಲಿ ಹುಚ್ಚೆಳ್ಳು, ಉದ್ದು ಮತ್ತು ಹೆಸರು.

10. ಕಾಲದ ಆಯತಿಯು ಚೆನ್ನಾಗಿದೆ. ಆದರೆ, ಶಿರಾ ತಾಲ್ಲೂಕಿನ ಮತ್ತು ತುರುವೇಕೆರೆ ಸಬ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಮಳೆಯು ಹೆಚ್ಚಾಗಿ ಬೇಕಾಗಿದೆ.

739

11. ಜನಾರೋಗ್ಯವು ಚೆನ್ನಾಗಿದೆ. ಆದರೆ, ಮದ್ದಗಿರಿ ತಾಲ್ಲೂಕಿನ ಕೊಡಗಡಲು ಗ್ರಾಮದಲ್ಲೂ ಮತ್ತು ಪಾವಗಡದ ತಾಲ್ಲೂಕಿನ ಅಕ್ಕಮ್ಮನಹಳ್ಳಿ ಮತ್ತು ಕನಮನಹಳ್ಳಿಗಳಲ್ಲಿಯೂ, ಕಾಲರಾ ಪುರ್ಕೊಳ್ಳಿಗಿ ಇದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿತೆ.

9. ವ್ಯವಸಾಯ ಕೆಲಸಗಳು—ಚಾಮರಾಜನಗರ, ಕ್ಷೀರಂಗಪಟ್ಟಣ, ನಂಜನಗೂಡು, ಮಳವಳ್ಳಿ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟಿಮಾಡುತ್ತಿದ್ದಾರೆ. ಪಿಡತೊರೆ, ಮತ್ತು ಟಿ. ನರಸೀಪುರ ಈ ತಾಲ್ಲೂಕುಗಳಲ್ಲಿ ಸಸಿಯನ್ನು ಕಿತ್ತು ನಾಟಿ ಇದ್ದಾರೆ.

ನಿಂತಿರುವ ಪೈರುಗಳು—ಎಲ್ಲಾ ತಾಲ್ಲೂಕುಗಳಲ್ಲಿಯೂ ಬಹ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ನಾಗಮಂಗಲದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಜೋಳವು ಬಾಡುತ್ತಾ ಇದೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಮಳವಳ್ಳಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ರಾಗಿ ಮತ್ತು ಭತ್ತ, ಮತ್ತು ನಂಜನಗೂಡು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಾಳುಗಳು, ಇವುಗಳು ಬಿತ್ತಲ್ಪಡುತ್ತಿವೆ. ಟಿ. ನರಸೀಪುರ, ಕೃಷ್ಣರಾಜಪೇಟೆ, ನಾಗಮಂಗಲ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ರಾಗಿ, ಟಿ. ನರಸೀಪುರ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಅವರೆ, ಇವುಗಳು ಬಿತ್ತಲ್ಪಟ್ಟಿವೆ. ಮಳ್ಳಿ ಇಲ್ಲದ್ದರಿಂದ, ನಾಗಮಂಗಲದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ರಾಗಿಯನ್ನೂ ಬಿತ್ತುವದಕ್ಕೆ ಸುರೂ ಮಾಡಿಲ್ಲ.

ಕುಯ್ಯಲಾವ ಪೈರುಗಳು—ಎಡತೊರೆ ತಾಲ್ಲೂಕಿನಲ್ಲಿ ಭೆರಿಯಡ್ಡದಲ್ಲೂ ಮತ್ತು ಗಾಳಿಗೇ ಕೆರೇ ಕೆಳಗೂ ಕಾರ್ ಭತ್ತ; ಚಾಮರಾಜನಗರ, ನಂಜನಗೂಡು, ಟಿ. ನರಸೀಪುರ, ಮಳವಳ್ಳಿ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಜೋಳ; ಮಳವಳ್ಳಿಯ ಕೆಲವು ಭಾಗಗಳಲ್ಲಿ ಎಳ್ಳು; ಕೃಷ್ಣರಾಜಪೇಟೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಬ್ಬು, ಹೆಸರು, ಉದ್ದು, ಎಳ್ಳು – ಇವುಗಳನ್ನ ಕುಯ್ಯುತ್ತಿದ್ದಾರೆ. ಮಳವಳ್ಳಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಬ್ಬನ್ನು ಆಲೆ ಆಡಿಸುತ್ತಿದ್ದಾರೆ

10. ಕಾಲದ ಆಯುತಿಯು ಚೆನ್ನಾಗಿದೆ. ಮೈಸೂರು, ಮಂಡ್ಯ, ನಂಜನಗೂಡು, ಮಳವಳ್ಳಿ, ನಾಗಮಂಗಲ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ನಿಂತಿರುವ ಪೈರುಗಳಿಗೆ ಮಳೆಯು ಬೇಕಾಗಿದೆಯೆಂದು ರಿಪೋರ್ಟಾಗಿದೆ.

11. ಮೈಸೂರು ಮತ್ತು ನಂಜನಗೂಡು ತಾಲ್ಲೂಕುಗಳ ಕೆಲವು ಭಾಗಗಳಲ್ಲಿಯೂ ಮದ್ದೂರು, ಮಂಡ್ಯ, ಹುಣಸೂರು, ನಂಜನಗೂಡು, ಫ್ಲೆಂಬ್ರಾಕ್ಸ್, ಈ ಊರುಗಳಲ್ಲಿಯೂ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಎಲ್ಲಾ ತಾಲ್ಲೂಕುಗಳಲ್ಲಿಯೂ ಆರೋಗ್ಯವಾಗಿವೆ ಎಂದು ರಿಪೋರ್ಟಾಗಿದೆ. ಎಲ್ಲಾ ಕಡೆಯಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಮಂಜರಾಬಾದ್ ಮತ್ತು ಬೇಲೂರು ತಾಲ್ಲೂಕುಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಆರಕೀಕೆರೆ ಹೊರ್ತು ಮಿಕ್ಕ ಎಲ್ಲಾ ಕಡೆಗಳಲ್ಲಿಯೂ ರಾಗಿ, ಭತ್ತ, ಕಬ್ಬು, ಹರಳು, ಅವರೆ, ತೊಗರಿ, ಹುಚ್ಚೆಳ್ಳು, ಮೆಣಸಿನಕಾಯಿ, ಇವುಗಳು ಸಾಧಾರಣವಾಗಿ ಚೆನ್ನಾಗಿವೆ.

ಬಿತ್ತನೆಯಾದ ಪೈರು—ಆರಕೀಕೆರೆ ತಾಲ್ಲೂಕಿನಲ್ಲಿ ರಾಗಿಯನ್ನು ಬಿತ್ತುತ್ತಾ ಇದ್ದಾರೆ.

ಕುಯ್ಯಲಾದ ಪೈರುಗಳು—ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ಕಬ್ಬು, ಕಾರ್ಭತ್ತ ಮತ್ತು ಹುಚ್ಚೆಳ್ಳು.

10. ಕಾಲದ ಆಯುತಿಯು ಸಾಧಾರಣವಾಗಿ ಚೆನ್ನಾಗಿದೆ. ಆರಕೀಕೆರೆ ತಾಲ್ಲೂಕಿನಲ್ಲಿ ಮಳೆಯು ಹೆಚ್ಚಾಗಿ ಬೇಕಾಗಿದೆ. ಆಹಾರ ಜಿನಸು ಸಾಕು.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಹಾಸನದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಪ್ಲೇಗು; ಚೆನ್ನರಾಯಪಟ್ಟಣದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಾಲರಾ, ಮತ್ತು ಮಂಜರಾಬಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಛಳಿಜ್ವರ ಮತ್ತು ಅಮುಕಂಬ್ಯೆ, ಇವುಗಳು ಇನ್ನೂ ಇದ್ದುಕೊಂಡು ಇವೆ.

12. ದನಗಳು ಸಾಧಾರಣವಾಗಿ ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಮೇವೂ, ಮತ್ತು ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಸೊರಬ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಯಾವವಂದರೆ, ಭತ್ತ, ರಾಗಿ, ಜೋಳ, ಕಬ್ಬು, ಇವುಗಳು ಒಳ್ಳೇ ಸ್ಥಿತಿಯಲ್ಲಿವೆ. ನಗರದ ತಾಲ್ಲೂಕಿನಲ್ಲೂ ಮತ್ತು ತೀರ್ಥಹಳ್ಳಿ ತಾಲ್ಲೂಕಿನ ಕೆಲವು ಭಾಗಗಳಲ್ಲಿಯೂ ಅಡಿಕೆಗೆ "ಕೊಳೆ ರೋಗವು" ಬಂದಿದೆ. ರೋಗವು ಹರಡದ ಹಾಗೆ ಇರಲು ಬೇಕಾದ ಮಾಮೊಲ್ ಏರ್ಪಾಡುಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

176

10. ಕಾಲದ ಆಯತಿಯು ಚೆನ್ನಾಗಿದೆ. ಆದರೆ, ಶಿಕಾರಿಪುರದ ತಾಲ್ಲೂಕಿನಲ್ಲಿ ಭತ್ತದ ಬೆಳೆಗೆ ಮಳೆಯು ಇನ್ನೂ ಸಾಕಾಗಿಲ್ಲವೆಂದೂ ರಿಪೋರ್ಟಾಗಿದೆ. ಆಹಾರ ಜಿನಸು ಸಾಕು.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆವರೆ, ಚನ್ನಗಿರಿ, ಶಿಕಾರಿಪುರ, ನಗರ, ಈ ತಾಲ್ಲೂಕುಗಳ ಮತ್ತು ಕುಂಸಿ ಸಬ್ ತಾಲ್ಲೂಕಿನ, ಕೆಲವು ಭಾಗಗಳಲ್ಲಿ ಶಿಡುಬು, ಮತ್ತು ಕುಂಸಿ ಸಬ್ ತಾಲ್ಲೂಕಿನ ಕೆಲವು ಭಾಗಗಳಲ್ಲಿಯೂ ಮತ್ತು ಹೊನ್ನಾಳಿ ತಾಲ್ಲೂಕಿನಲ್ಲಿಯೂ, ಪ್ಲೇಗ್, ಇವುಗಳು ಇನ್ನೂ ಇದ್ದುಕೊಂಡು ಇವೆ. ಸೊರಬ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳ ಇವುಗಳು ಅಷ್ಟಗಿ ಬರುತ್ತಿವೆ.

12. ಸಾಧಾರಣವಾಗಿ ಎಲ್ಲಾ ತಾಲ್ಲೂಕುಗಳಲ್ಲಿಯೂ ದನಗಳಿಗೆ ಗೋವ್ಹಾರೀರೋಗವು ಬರುತ್ತಿದೆ. ಹುಲ್ಲೂ, ನೀರೂ, ಸಿಕ್ಕುತ್ತವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿತ್ತು.

9. ವ್ಯವಸಾಯ ಕೆಲಸಗಳು—ಕೊಪ್ಪ, ಚಿಕ್ಕಮಗಳೂರು, ಮೂಡಿಗೆರೆ, ಎಸೇಹಳ್ಳಿ, ಶೃಂಗೇರಿ, ಇವುಗಳಲ್ಲಿ, ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ತರೀಕೆರೆಯಲ್ಲಿ ಕಬ್ಬು ಮತ್ತು ಭತ್ತ; ಕೊಪ್ಪದಲ್ಲಿ ಕಬ್ಬು, ಭತ್ತ, ಯಾಲಕ್ಕಿ, ಅಡಿಕೆ, ಮತ್ತು ಕಾಫಿ; ಚಿಕ್ಕಮಗಳೂರಿನಲ್ಲಿ ಭತ್ತ, ಕಬ್ಬು, ರಾಗಿ, ತೊಗರಿ, ಹುಚ್ಚೆಳ್ಳು, ಜೋಳ ಮತ್ತು ಕೊತ್ತಂಬರಿ; ಕಡೂರಿನಲ್ಲಿ ಜೋಳ, ಹೆಸರು, ಉದ್ದು, ಕೊತ್ತಂಬರಿ, ಹರಳು, ಭತ್ತ, ಕಬ್ಬು ಮತ್ತು ಹುಚ್ಚೆಳ್ಳು; ಮೂಡಗೆರೆಯಲ್ಲಿ ರಾಗಿ ಮತ್ತು ಭತ್ತ; ಎಸೇಹಳ್ಳಿಯಲ್ಲಿ ಕಬ್ಬು ಮತ್ತು ಕಾಫಿ; ಮತ್ತು ಶೃಂಗೇರಿಯಲ್ಲಿ ಅಡಿಕೆ; ಇವುಗಳೆಲ್ಲಾ ಬಳ್ಳೇ ಸ್ಥಿತಿಯಲ್ಲಿವೆ.

ಬಿತ್ತನೆಯಾದ ಪೈರುಗಳು—ಕಡೂರಿನಲ್ಲಿ ರಾಗಿ, ಭತ್ತ, ಅವರೆ, ತೊಗರಿ ಮತ್ತು ಮೆಣಸಿನಕಾಯಿ; ತರೀಕೆರೆಯಲ್ಲಿ ರಾಗಿ, ಜೋಳ ಮತ್ತು ಅವರೆ; ಇವುಗಳು ಬಿತ್ತಲ್ಪಡುತ್ತಿವೆ.

ಕುಯ್ಯಲಾದ ಪೈರುಗಳು—ಕಡೂರಿನಲ್ಲಿ ಕಬ್ಬು ಮತ್ತು ಭತ್ತ. ಕಬ್ಬಿನ ಉತ್ಪತ್ತಿ 8ರಿಂದ 12 ಆಣೆ ವರಿಗೆ.

10. ಕಾಲದ ಆಯತಿಯು ಚೆನ್ನಾಗಿದೆ.

11. ಚಿಕ್ಕಮಗಳೂರು ತಸಬಾದಲ್ಲಿಯೂ ಮತ್ತು ಅದೇ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿಯೂ ಪ್ಲೇಗ್ ಇರುವದು ಹೊರ್ತು; ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ತರೀಕೆರೆ, ಚಿಕ್ಕಮಗಳೂರು, ಮತ್ತು ಶೃಂಗೇರಿ ಇವುಗಳಲ್ಲಿ "ದೊಡ್ಡ ರೋಗವು" ಕಮ್ಮಿಯಾಗುತ್ತಿದೆಯೆಂದು ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚನ್ನಾಗಿದೆ.

9. ನಿಂತಿರುವ ಪೈರುಗಳು—ಯಾವವಂದರೆ, ಅರಳಿ, ರಾಗಿ, ಜೋಳ, ಹುರುಳಿ, ಹೆಸರು, ಉದ್ದು, ಕಬ್ಬು, ಅವರೆ, ಭತ್ತ, ಮೆಣಸಿನಕಾಯಿ, ಇವುಗಳು ಬಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಹಿರಿಯೂರು, ಹೊಳಲ್ಕೆರೆ, ದೇವನಗೆರೆ ಈ ತಾಲ್ಲೂಕುಗಳಲ್ಲಿ ರಾಗಿ; ಹೊಳಲ್ಕೆರೆ, ದೇವನಗೆರೆ ಮೊಳಕಾಲ್ಮುರು, ಈ ತಾಲ್ಲೂಕುಗಳಲ್ಲಿ ಅರಳಿ; ಹೊಳಲ್ಕೆರೆ ಮತ್ತು ದೇವನಗೆರೆ ತಾಲ್ಲೂಕುಗಳಲ್ಲಿ ಅವರೆ ಮತ್ತು ತೊಗರಿ; ಹಿರಿಯೂರು ತಾಲ್ಲೂಕಿನಲ್ಲಿ ಅರಳಿ; ಮತ್ತು ಮೊಳಕಾಲ್ಮುರು ತಾಲ್ಲೂಕಿನಲ್ಲಿ ಭತ್ತ.

ಕುಯ್ಯಲಾದ ಪೈರುಗಳು—ಏನೂ ಇಲ್ಲ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ಇಸವಿಯ ಆಗಸ್ಟು 14ನೆಯ ತಾರೀಖು.

ಎ. ರಂಗಸ್ವಾಮಿ ಐಯ್ಯಂಗಾರಿ,
ರೆವಿನ್ಯೂ ಕಮಿಷನರು.

Government Press, Bangalore—1907.